| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : | 179 |
| ಸದಸ್ಯರ ಹೆಸರು : | ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 11.07.2018 |
| ಉತ್ತರಿಸುವವರು : | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

******

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಭೂಮಿಯನ್ನು ಸಕ್ರಮಗೊಳಸಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ವಿಲೇವಾರಿ ಮಾಡಲಾಗಿರುವ ಹಾಗೂ ಇನ್ನೂ ವಿಲೇವಾರಿ ಮಾಡದೆ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; | ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ದಿನಾಂಕ 27.4.1978ರ ಪೂರ್ವದಲ್ಲಿ 3134 ಕುಟುಂಬಗಳು ಒತ್ತುವರಿ ಮಾಡಿದ್ದ 2122.08 ಹೆ ಅರಣ್ಯ ಪ್ರದೇಶವನ್ನು ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಸಲು ಕೇಂದ್ರ ಸರ್ಕಾರವು ಅನುಮತಿ ನೀಡಿರುತ್ತದೆ. ಕೇಂದ್ರ ಸರ್ಕಾರದಿಂದ ಅನುಮೋದನೆಯಾದ ಪ್ರಕರಣಗಳನ್ನು ಜಿಲ್ಲಾಧಿಕಾರಿಯವರು ವಿಚಾರಣೆ ನಡೆಸಿ 1454 ಕುಟುಂಬಗಳು ಒತ್ತುವರಿ ಮಾಡಿದ್ದ 1026.06 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಮಾನ್ಯ ಮಾಡಿರುತ್ತಾರೆ. 1301 ಕುಟುಂಬಗಳು ಒತ್ತುವರಿ ಮಾಡಿದ್ದ 810.91 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದ ಅರ್ಜಿಗಳು ಜಿಲ್ಲಾಧಿಕಾರಿಗಳಂದ ತಿರಸ್ಕೃತಗೊಂಡಿದ್ದು, ಉಳದ 379 ಕುಟುಂಬಗಳು ಒತ್ತುವರಿ ಮಾಡಿದ್ದ 285.11 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದ ಅರ್ಜಿಗಳು ಜಿಲ್ಲಾಧಿಕಾರಿಗಳವರಲ್ಲಿ ಬಾಕಿ ಇರುತ್ತವೆ. ವಿಭಾಗವಾರು ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿ ಸಲ್ಲಿಸಿದೆ.<br>ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 ಮತ್ತು ನಿಯಮ 2008 ಪ್ರಕಾರ ಸಮಾಜ ಕಲ್ಯಾಣ ಇಲಾಖೆ ನೋಡೆಲ್ ಇಲಾಖೆ ಆಗಿರುತ್ತದೆ. ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ ರವರಿಂದ ಪಡೆದ ಮಾಹಿತಿಯು ಕೆಳಗಿನಂತೆ ಇರುತ್ತದೆ:<br>ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 ಮತ್ತು ನಿಯಮ 2008 ಹಾಗೂ ತಿದ್ದುಪಡಿ ನಿಯಮಗಳು 2012ರ ಅನ್ವಯ ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 85518 ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ ಅರ್ಜಿಗಳಲ್ಲಿ 2506 ಪ್ರಕರಣಗಳಲ್ಲಿ ಅರಣ್ಯ ಹಕ್ಕು ಪತ್ರ ನೀಡಿರುತ್ತದೆ. 43042 ಅರ್ಜಿಗಳು ವಿವಿಧ ಹಂತದ ಅರಣ್ಯ ಹಕ್ಕು ಸಮಿತಿಗಳಲ್ಲಿ ತಿರಸ್ಕೃತಗೊಂಡಿರುತ್ತವೆ. ಉಳದ |

| | | |
|---|---|---|
| | | 39970 ಅರ್ಜಿಗಳು ವಿವಿಧ ಸಮಿತಿಗಳಾದ ಅರಣ್ಯ ಹಕ್ಕು ಸಮಿತಿ / ಉಪ ವಿಭಾಗ ಸಮಿತಿ / ಜಿಲ್ಲಾಮಟ್ಟದ ಸಮಿತಿಗಳಲ್ಲಿ ಪರಿಶೀಲನೆಗೆ ಬಾಕಿ ಇರುತ್ತವೆ. ತಾಲ್ಲೂಕುವಾರು ವಿವರಗಳನ್ನು <u>ಅನುಬಂಧ-2</u>ರಲ್ಲಿ ಲಗತ್ತಿಸಿ ಸಲ್ಲಿಸಿದೆ.<br><br>ಕೇಂದ್ರ ಸರ್ಕಾರ ಅನುಮೋದಿತ 1978 ಪೂರ್ವ ಅತಿಕ್ರಮಣದಾರರು ಮತ್ತು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 ಮತ್ತು ನಿಯಮ 2008ರ ಅಡಿಯಲ್ಲಿ ಅರಣ್ಯ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಮಾತ್ರ ಅವಕಾಶವಿದ್ದು, ಅರಣ್ಯ ಜಮೀನುಗಳನ್ನು ಸಕ್ರಮಗೊಳಿಸಲು ಬೇರೆ ಇನ್ಯಾವುದೇ ಕಾಯ್ದೆ ಹಾಗೂ ನಿಯಮಾವಳಿಗಳ ಅಡಿಯಲ್ಲಿ ಪ್ರಸ್ತುತ ಅವಕಾಶವಿರುವುದಿಲ್ಲ. |
| ಆ) | ಅರಣ್ಯಾಧಿಕಾರಿಗಳು ಅರಣ್ಯ ಪ್ರದೇಶದಲ್ಲಿ ವ್ಯವಸಾಯ ಮಾಡುತತಿದ್ದ ರೈತರನ್ನು ಒಕ್ಕಲೆಬ್ಬಿಸಿ, ಅವರುಗಳಿಗೆ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಅರಣ್ಯ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿರುವ ರೈತರಿಗೆ ಅರಣ್ಯ ಒತ್ತುವರಿಯನ್ನು ತಡೆಯುವ ಸಂಬಂಧ ನಿಯಮಾನುಸಾರ ಹಾಗೂ ಕಾನೂನಾತ್ಮಕವಾಗಿ ಅರಣ್ಯ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಕಿರುಕುಳ ನೀಡುತ್ತಿಲ್ಲ. |

(ಆರ್. ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅಪಜೀ 79 ಎಫ್‌ಜಿಎಲ್ 2018

## ಅನುಬಂಧ-1

ಚುಕ್ಕೆ ಗುರುತಿನ ಪ್ರಶ್ನೆ 37 (179) ಕ್ರಮ ಸಂಖ್ಯೆ ಅ

ಭಾರತ ಸರ್ಕಾರವು ಅನುಮೋದಿಸಿದಂತೆ ದಿನಾಂಕ:27.04.1978ರ ಪೂರ್ವದ ಒತ್ತುವರಿ ಪ್ರದೇಶ ಸಕ್ರಮಾತಿಗೊಳಿಸಲು ಕೈಗೊಂಡ ಪ್ರಗತಿ ವಿವರ

| ಕ್ರ ಸಂ | ಜಿಲ್ಲೆ | ವಿಭಾಗ | ಕೇಂದ್ರ ಸರ್ಕಾರದಿಂದ ಅನುಮೋದಿಸಿಸದ ಪ್ರಕರಣಗಳು | | ಜಿಲ್ಲಾಧಿಕಾರಿಯರಿಂದ ಅನುಮೋದನೆಯಾದ ಪ್ರಕರಣಗಳು | | ಜಿಲ್ಲಾಧಿಕಾರಿಯವರಿಂದ ತಿರಸ್ಕೃತವಾದ ಪ್ರಕರಣಗಳು | | ವಿಲೇಗೆ ಬಾಕಿಯಿರುವ ಪ್ರಕರಣಗಳು | |
|---|---|---|---|---|---|---|---|---|---|---|
| | | | ಕುಟುಂಬ ಗಳು | ವಿಸ್ತೀರ್ಣ ಹೆಕ್ಟರ್ ಗಳಲ್ಲಿ | ಕುಟುಂಬ ಗಳು | ವಿಸ್ತೀರ್ಣ ಹೆಕ್ಟರ್ ಗಳಲ್ಲಿ | ಕುಟುಂಬ ಗಳು | ವಿಸ್ತೀರ್ಣ ಹೆಕ್ಟರ್ ಗಳಲ್ಲಿ | ಕುಟುಂಬಗಳು | ವಿಸ್ತೀರ್ಣ ಹೆಕ್ಟರ್ ಗಳಲ್ಲಿ |
| 1 | ಶಿವಮೊಗ್ಗ | ಭದ್ರಾವತಿ | 211 | 119.58 | 87 | 65.56 | 124 | 54.02 | 0 | 0 |
| 2 | ಶಿವಮೊಗ್ಗ | ಸಾಗರ | 2216 | 1401.62 | 1071 | 790.79 | 975 | 598.19 | 170 | 12.64 |
| 3 | ಶಿವಮೊಗ್ಗ | ಶಿವಮೊಗ್ಗ | 707 | 600.88 | 296 | 169.71 | 202 | 158.70 | 209 | 272.47 |
| 4 | ಶಿವಮೊಗ್ಗ | ಶಿವಮೊಗ್ಗ ವನ್ಯಜೀವಿ | ವನ್ಯಜೀವಿ ಅಭಯಾರಣ್ಯ ಪ್ರದೇಶ | | | | | | | |
| | | ಒಟ್ಟು | 3134 | 2122.08 | 1454 | 1026.06 | 1301 | 810.91 | 379 | 285.11 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅರಣ್ಯ ಪಡೆ ಮುಖ್ಯಸ್ಥರು)

ಅನುಬಂಧ-2

ಚುಕ್ಕೆ ಗುರುತಿನ ಪ್ರಶ್ನೆ 179(37) : ಕ್ರಮ ಸಂಖ್ಯೆ ಅ

ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮ 2006 ಮತ್ತು ನಿಯಮ 2008 ಹಾಗೂ ತಿದ್ದುಪಡಿ ನಿಯಮಗಳು 2012ರ ಅನ್ವಯ ಅರ್ಜಿಗಳ ವಿಲೇವಾರಿಯ ಪ್ರಗತಿ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕು | ಸ್ವೀಕರಿಸಿದ ಅರ್ಜಿಗಳು | | | | ಹಕ್ಕು ಪತ್ರ ವಿತರಿಸಿದ ಅರ್ಜಿಗಳ ವಿವರ | | | | ತಿರಸ್ಕರಿಸಿದ ಅರ್ಜಿಗಳು ವಿವರ | ವಿವಿದ ಹಂತದಲ್ಲಿ ಪರಿಶೀಲನೆಗೆ ಬಾಕಿ ಇರುವ ಅರ್ಜಿಗಳು |
|---|---|---|---|---|---|---|---|---|---|---|---|---|
| | | | ಪ.ವರ್ಗ | ಇತರೆ | ಸಮುದಾಯ | ಒಟ್ಟು | ಪ.ವರ್ಗ | ಇತರೆ | ಸಮುದಾಯ | ಒಟ್ಟು | | |
| 1 | | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಶಿವಮೊಗ್ಗ | ಶಿವಮೊಗ್ಗ | 498 | 8613 | 325 | 9436 | 232 | 0 | 6 | 238 | 5865 | 3333 |
| 2 | | ಭದ್ರಾವತಿ | 421 | 3826 | 58 | 4305 | 202 | 0 | 18 | 220 | 3576 | 509 |
| 3 | | ತೀರ್ಥಹಳ್ಳಿ | 463 | 5796 | 92 | 6351 | 322 | 77 | 29 | 428 | 2473 | 3450 |
| 4 | | ಸಾಗರ | 610 | 14355 | 145 | 15110 | 112 | 109 | 8 | 229 | 7932 | 6949 |
| 5 | | ಹೊಸನಗರ | 687 | 16433 | 781 | 17901 | 254 | 250 | 20 | 524 | 8456 | 8921 |
| 6 | | ಶಿಕಾರಿಪುರ | 1310 | 14920 | 7 | 16237 | 583 | 4 | 7 | 594 | 7453 | 8190 |
| 7 | | ಸೊರಬ | 645 | 15492 | 41 | 16178 | 236 | 0 | 37 | 273 | 7287 | 8618 |
| ಒಟ್ಟು | | | 4634 | 79435 | 1449 | 85518 | 1941 | 440 | 125 | 2506 | 43042 | 39970 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)